ಪ್ರತಿಕ್ರಿಯೆಯನ್ನು ಅರ್ಥ ಮಾಡಿಕೊಂಡ ಅನುಪಮಾ ಮತ್ತು ನಿರಂಜನ ಅವರು ಬಹುಶಃ ನಾಲ್ಕೈದು ವರ್ಷಗಳ ನಂತರ ತಮ್ಮ ಆಸ್ಪತ್ರೆಯ ಸ್ಥಾನಾಂತರಣದ ಕುರಿತು ದೃಢ ನಿರ್ಣಯ ತೆಗೆದುಕೊಂಡು, ಬೆಂಗಳೂರಿಗೆ ಹೋದರು ಅನಿಸುತ್ತದೆ.

ಒಂದು ದಿನ (1960 ಆಗಸ್ಟ್ 28) ಸಂಜೆ ಹೊತ್ತು ನಾನು, ಗಿರಡ್ಡಿ ಕೂಡಿಕೊಂಡು ನಿರಂಜನರ ಮನೆಗೆ ಹೋದೆವು. ಮೊದಲು ನಮ್ಮ ಬಗ್ಗೆ ವಿಚಾರಿಸಿಕೊಂಡರು. ಬಹುಶಃ ಎರಡು ತಾಸು ನಮ್ಮೊಡನೆ ನಿರಾಳವಾಗಿ, ನಿರರ್ಗಳವಾಗಿ ಮಾತಾಡಿದರು. ನಾವು ಕೆಲವು ಗೆಳೆಯರು ಕೂಡಿಕೊಂಡು ಪ್ರತಿ ರವಿವಾರ ಭೆಟ್ಟಿಯಾಗುತ್ತಿದ್ದ 'ಸ್ನೇಹಕುಂಜ'ದ ಬಗ್ಗೆ ತಮ್ಮ ಸಂತೋಷ ವ್ಯಕ್ತಪಡಿಸಿದರು. ನಾನು ಓದಿದ ಅವರ ಕಾದಂಬರಿ, ಕತೆಗಳ ಬಗ್ಗೆ ಹೇಳಿದೆ. ಅವರ 'ಕೊನೆಯ ಗಿರಾಕಿ' ಕತೆಯನ್ನು 'ಅಂತಿಮ್ ಗ್ರಾಹಕ್' ಹೆಸರಿನಿಂದ ಹಿಂದಿಗೆ ಅನುವಾದಿಸಿದ್ದು ಹೇಳಿದೆ. 'ಹೌದು, ಪಂಚಾಕ್ಷರಿ ಹೇಳಿದ್ದಾರೆ, ನೀವು ನನ್ನ ಉಳಿದ ಕತೆಗಳನ್ನೂ ಅನುವಾದಿಸಿರಿ' ಅಂದರು. ಅವರಿಗೆ ಹಿಂದೀ ಭಾಷೆ ತಿಳಿಯುವುದಿಲ್ಲ ಎಂದು ನಾನು ತಿಳಿದಿದ್ದು ತಪ್ಪಾಗಿತ್ತು. ಅವರು ಪ್ರೇಮ್‌ಚಂದ್‌ರ ಅನೇಕ ಕತೆಗಳನ್ನು ಮೂಲ ಹಿಂದೀ ಭಾಷೆಯಲ್ಲಿಯೇ ಓದಿ, ಅವರಿಂದ ಪ್ರಭಾವಿತರಾಗಿದ್ದುದನ್ನು ಹೇಳುತ್ತ, ನಮ್ಮ ಆಪ್ತ ಮಿತ್ರರಂತೆಯೇ ಮಾತಾಡತೊಡಗಿದರು. ಅಷ್ಟರಲ್ಲಿ ಕಿರು ತಿಂಡಿ, ಕಾಫಿಯೊಂದಿಗೆ ಹೊರಬಂದ ಅನುಪಮಾ ಅವರು, ಟೀಪಾಯ್ ಮೇಲೆ ಇಟ್ಟು, ತಾವು ಆಸ್ಪತ್ರೆ ಕಡೆಗೆ ಹೊರಟದ್ದುದಾಗಿ ಹೇಳಿ ಹೋದರು. ನಿರಂಜನರು ಎಲ್ಲ ಸಂಬಂಧ, ವಿಷಯಗಳ ಬಗೆಗೂ ನಿರಂಜನ ಸ್ವಭಾವದವರೇ ಆಗಿದ್ದಾರೆ, ಅವರು ಹೆಚ್ಚು ಮಾತಾಡಲಿಕ್ಕಿಲ್ಲ ಅಂದುಕೊಂಡಿದ್ದೆವು; ಆದರೆ ಅಂದು ಒಳ್ಳೆಯ ಮೂಡ್‌ನಲ್ಲಿದ್ದರು. ಅವರದು ನಿರರ್ಗಳ ಮಾತಿನ ಝರಿ. ನಡುನಡುವೆ ವಿನೋದವನ್ನೂ ಬಳಸುತ್ತಿದ್ದರು. '1950ರಿಂದಲೇ ನಾನು ರಾಜಕೀಯ ಬಿಟ್ಟು ಹೊರಬಂದೆ. ಪ್ರೇಮ್‌ಚಂದ್‌ರ ಅಧ್ಯಕ್ಷತೆಯಲ್ಲಿ ಲಖನೌದಲ್ಲಿ ನಡೆದ ಅಖಿಲ ಭಾರತ ಪ್ರಗತಿಶೀಲ ಲೇಖಕರ ಸಮ್ಮೇಳನದಿಂದಲೂ ನನಗೆ ಭ್ರಮನಿರಸನವೇ ಆಗಿದೆ. ಅವರ ಅಧ್ಯಕ್ಷ ಭಾಷಣವನ್ನು ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಓದಿದ್ದೇನೆ. ಅದು ಭಾರತದ ಎಲ್ಲ ಪ್ರಗತಿಶೀಲ ವಿಚಾರಧಾರೆಯ ಲೇಖಕರನ್ನು ಒಂದುಗೂಡಿಸುವ ಪ್ರೇರಣಾಸ್ರೋತದಂತಿತ್ತು. ಆದರೆ ನಂತರದ ಬೆಳವಣಿಗೆಗಳನ್ನು ಗಮನಿಸಿದರೆ, ಅಲ್ಲಿ ಬಂದಿದ್ದ ಕೆಲವು ಹಿಂದೀ, ಉರ್ದೂ ಲೇಖಕರು ತಮ್ಮ ತಮ್ಮ ಕೃತಿಗಳನ್ನು ಪ್ರಚಾರ ಮಾಡುವ ಹಂಬಲದವರೇ ಆಗಿದ್ದರು ಅಂದುಕೊಂಡಿದ್ದೇನೆ. ಹಿಂದೀ, ಉರ್ದೂ ಬಿಟ್ಟು ಬೇರೆ ಭಾಷೆಗಳ ಲೇಖಕರನ್ನು ಆ ಸಮ್ಮೇಳನ ಸ್ವಲ್ಪ ಅಂತರದಿಂದಲೇ ಕಂಡಿದೆ. ಮುಖ್ಯವಾಗಿ ನನಗೆ ಹಿಂದಿಯ ಕಾದಂಬರಿಕಾರ, ಕತೆಗಾರರಾದ ಜೈನೇಂದ್ರಕುಮಾರ್ ಬಗ್ಗೆ ಬಹಳ ಬೇಸರವಾಗಿದೆ. ಅವರು ಮತ್ತು ಅಂಥ ಕೆಲವು ಹಿಂದೀ ಲೇಖಕರ ರೂಕ್ಷ ನಡೆಯಿಂದಾಗಿ ನಾನು ಆ ಸಂಘಟನೆಯಿಂದ ದೂರವಾಗಿದ್ದೇನೆ; ನಾನು ವೈಯಕ್ತಿಕವಾಗಿ ಅಂಥ ವ್ಯಕ್ತಿಗಳಿಂದ ದೂರವಾಗಿದ್ದೇನೆ ನಿಜ, ಆದರೆ ಪ್ರಗತಿಶೀಲ ಚಿಂತನೆಗೆ ಬದ್ಧನಾಗಿದ್ದೇನೆ; ನನ್ನ ತತ್ವಗಳನ್ನು ಮಾತ್ರ ಕೊನೆಯವರೆಗೂ ಉಳಿಸಿಕೊಂಡಿದ್ದೇನೆ. ಅದು ನನ್ನ ಸಿದ್ಧಾಂತ, ನನ್ನ ತತ್ವ, ನನ್ನ ಬದುಕು. ಅದನ್ನು ಉಳಿಸಿಕೊಂಡೇ ನನ್ನ ಸಾಹಿತ್ಯ ರಚಿತವಾಗುತ್ತಿದೆ; ಎಲ್ಲ ಜಾತಿ, ಧರ್ಮಗಳಲ್ಲಿರುವ ಎಲ್ಲ ಬಗೆಯ ಶೋಷಣೆ, ಕ್ರೌರ್ಯಗಳನ್ನು, ಮೇಲ್ಜಾತಿಯವರು, ಮೇಲ್ವರ್ಗದವರು ಮಾಡುವ ಅನ್ಯಾಯಗಳನ್ನು ನಾನು ವಿರೋಧಿಸುತ್ತೇನೆ. ಕುಳಕುಂದ ಶಿವರಾಯ ಇದ್ದವನು ನಿರಂಜನನಾಗಿ, ಜಾತಿ, ಕುಲಗಳಿಂದ ದೂರವಾಗಿದ್ದೇನೆ. ನಮ್ಮ ಸಮಾಜದಲ್ಲಿ ಕೇವಲ ಉಪದೇಶ ಕೊಡುವವರನ್ನೇ ಕಂಡಿದ್ದೇನೆ, ಹೀಗಾಗಿ ನಾನು ಭಾಷಣ ಮಾಡುವುದನ್ನೂ ಬಿಟ್ಟಿದ್ದೇನೆ. ಈಗ ರಾಜಕೀಯವನ್ನೇ ಬಿಟ್ಟದ್ದೇನೆ, ಕಮ್ಯುನಿಸ್ಟ್ ಪಾರ್ಟಿಯ ಸದಸ್ಯತ್ವವನ್ನೂ ತೊರೆದಿದ್ದೇನೆ... ನನ್ನ ಅನುಭವದಲ್ಲಿ, ಕಾದಂಬರಿ ಬರೆಯುವುದಕ್ಕಿಂತ ಕತೆ ಬರೆಯುವುದು ಕಠಿಣ. ನಾನು ಅನುಭವಗಳನ್ನು ಕತೆಗಳ ರೂಪದಲ್ಲಿ ನೀಡುತ್ತೇನೆ, ಅದಕ್ಕೆ ನೀವು ಯಾವ ಸಿದ್ಧಾಂತದ ಹೆಸರನ್ನಾದರೂ ಕೊಟ್ಟುಕೊಳ್ಳಿರಿ...'

ಅಂದು ನಿರಂಜನರ ಕೂಡ ಮಾತಾಡಿ ಬಂದ ಮೇಲೆ ಬದುಕನ್ನು, ಭಾಷಣಕಾರರನ್ನು, ರಾಜಕೀಯ ಧುರೀಣರನ್ನು, ಧಾರ್ಮಿಕ ವ್ಯಕ್ತಿಗಳನ್ನು ನೋಡುವ ನಮ್ಮ ದೃಷ್ಟಿಯಲ್ಲಿ ಬಹಳ ಬದಲಾವಣೆ ಬಂದಿತು. ನಿರಂಜನರ ಜೀವಂತ ಅನುಭವಗಳನ್ನು ಅವರ